## ಕರ್ನಾಟಕ ಸರ್ಕಾರ

## ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರು ಹೊರಡಿಸಿದ ಕಛೇರಿ ನಡವಳಿಗಳು

ವಿಷಯ: ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಸಂಸ್ಥೆಯ ವತಿಯಿಂದ ಬಾಗಲಕೋಟೆಯ ಜಿಲ್ಲಾ ಪೋಲೀಸ್ ಅಧೀಕ್ಷಕರ ಕಛೇರಿಯಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15ನೇ ಸಾಲಿನ ರಾಜ್ಯ ಸಹಾಯಧನ ಮಂಜೂರು ಮಾಡಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ:ಮಮಇ/265/ಎಸ್‌ಜೆಡಿ 2004 ದಿ: 27.11.2004
2. ಸರ್ಕಾರದ ಆದೇಶ ಸಂಖ್ಯೆ:ಮಮಇ/156/ಪಿಹೆಚ್‌ಪಿ/2006(3) ದಿ:28.08.2006
3. ಸರ್ಕಾರದ ಆದೇಶ ಸಂಖ್ಯೆ:ಮಮಇ/244/ಪಿಹೆಚ್‌ಪಿ/2007(5) ದಿ:21.08.2007
4. ಸರ್ಕಾರದ ಆದೇಶ ಸಂಖ್ಯೆ:ಮಮಇ/270/ಪಿಹೆಚ್‌ಪಿ/2013 ದಿ:28-08-2013
5. ಸರ್ಕಾರದ ಆದೇಶ ಸಂಖ್ಯೆ:ಮಮಇ/285/ಪಿಹೆಚ್‌ಪಿ/2014 ದಿನಾಂಕ:30-08-2014
6. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬಾಗಲಕೋಟೆ ಜಿಲ್ಲೆ ಇವರ ಸಂಖ್ಯೆ:ಜಿಅಂಕಬಾ/ಹಿನಾಸವಾ/ಅಪ್ರಸಕು/ 2014-15/595 ದಿ:29-09-2014.
7. ಸರ್ಕಾರದ ಕಾರ್ಯದರ್ಶಿಗಳು, ಮಮಅಇ, ಬೆಂಗಳೂರು ಇವರ ಪತ್ರ ಸಂಖ್ಯೆ:ಮಮಇ/01 ಪಿಹೆಚ್‌ಪಿ/2014 ದಿನಾಂಕ:04-01-2014

~ * ~ * ~ * ~ * ~ * ~

**ಪ್ರಸ್ತಾವನೆ:**

ಉಲ್ಲೇಖ (1) ರಿಂದ (3)ರ ವರೆಗಿನ ಸರ್ಕಾರದ ಆದೇಶಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 15 ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿಯಲ್ಲಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿರುತ್ತದೆ. ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಸಹಾಯವಾಣಿ ಯೋಜನೆಯ ನಿರ್ವಹಣೆಗಾಗಿ ನೀಡಲಾಗುತ್ತಿದ್ದ ವಾರ್ಷಿಕ ಅನುದಾನವನ್ನು ರೂ.3.60ಲಕ್ಷಗಳಿಂದ ರೂ.7.15ಲಕ್ಷಗಳಿಗೆ ಹೆಚ್ಚಿಸಿ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು ಇಲ್ಲದಿರುವ ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಗದಗ, ಹಾಸನ, ಹಾವೇರಿ, ಕೊಡಗು, ಕೊಪ್ಪಳ, ಮಂಡ್ಯ, ರಾಮನಗರ, ಉಡುಪಿ, ಉತ್ತರ ಕನ್ನಡ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಹಿರಿಯ ನಾಗರಿಕರ ಹಿತದೃಷ್ಟಿಯಿಂದ, ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ 14 ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳಿಗೆ 5 ವರ್ಷಗಳ ನಂತರ ಅನುದಾನವನ್ನು ನಿರಂತರವಾಗಿ ಮುಂದುವರೆಸುವಂತೆ ಉಲ್ಲೇಖ(5)ರಲ್ಲಿ ಸರ್ಕಾರದ ಆದೇಶ ಹೊರಡಿಸಿದ್ದು, ಸದರಿ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲುಕು, ಬಾಗಲಕೋಟೆ ಸಂಸ್ಥೆಯ ಹೆಸರನ್ನು ಕ್ರಮ ಸಂಖ್ಯೆ(12)ರಲ್ಲಿ ನಮೂದಿಸಲಾಗಿದೆ.

ಪುಟ ಸಂಖ್ಯೆ..2ಕ್ಕೆ

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬಾಗಲಕೋಟೆ ಇವರು ಉಲ್ಲೇಖ(6)ರ ಪತ್ರದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಬಾಗಲಕೋಟೆಯ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಅನುಷ್ಠಾನಗೊಳಿಸುತ್ತಿರುವ ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಸಂಸ್ಥೆಯ ಪ್ರಸ್ತಾವನೆಯನ್ನು ತಪಾಸಣಾ ವರದಿಯೊಂದಿಗೆ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬಾಗಲಕೋಟೆ ಇವರು ಸದರಿ ಸಂಸ್ಥೆಯು ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ ದಿನಾಂಕ:23-09-2014ರಂದು ಭೇಟಿ ನೀಡಿ ಪರಿಶೀಲಿಸಿ, ಜಂಟಿ ತಪಾಸಣಾ ವರದಿಯನ್ನು ಸಲ್ಲಿಸಿದ್ದು, ತಪಾಸಣಾ ವರದಿಯಲ್ಲಿ "ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದಲ್ಲಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ, ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸಿರುತ್ತಾರೆ. ಸಹಾಯವಾಣಿ ಕೇಂದ್ರದಲ್ಲಿ ಆಪ್ತ ಸಲಹೆ, ಸಮಾಲೋಚನೆ, ಕಾನೂನು ಸಲಹೆ, ಆರಕ್ಷಕ ಸಹಾಯ, ಕಳೆದು ಹೋದ ಹಿರಿಯ ನಾಗರಿಕರ ಹುಡುಕುವಿಕೆ ಇವುಗಳ ಮೂಲಕ ಸಮಯೋಚಿತ ಆಸರೆ ನೀಡುತ್ತಿದ್ದಾರೆ. ಪ್ರಯುಕ್ತ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ರಾಜ್ಯ ಪುರಸ್ಕೃತ ಯೋಜನೆಯಡಿಯಲ್ಲಿ 2014-15ನೇ ಸಾಲಿನ ಅನುದಾನವನ್ನು ಬಿಡುಗಡೆ ಮಾಡಬಹುದಾಗಿದೆ" ಎಂದು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರದ ಉಲ್ಲೇಖ(7)ರ ಪತ್ರದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಇಲಾಖಾ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಮುಂದುವರಿದ ಯೋಜನೆಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುವ ರಾಜ್ಯ ಅನುದಾನ ಬಿಡುಗಡೆಯನ್ನು ನಿರ್ದೇಶಕರ ಹಂತದಲ್ಲಿ ಕ್ರಮವಹಿಸಲು ಸೂಚಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಸಂಸ್ಥೆಯ ವತಿಯಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಬಾಗಲಕೋಟೆಯ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15ನೇ ಸಾಲಿಗೆ ಅನ್ವಯವಾಗುವ ಅನುದಾನ ರೂ.6,15,600/-ಗಳ (ಸಂಸ್ಥೆಯು ಭರಿಸಬೇಕಾದ ಶೇ.10ರಷ್ಟು ಅನುದಾನ ಹೊರತುಪಡಿಸಿ)ಅನುದಾನಕ್ಕೆ ಮಂಜೂರಾತಿ ನೀಡಿ ಬಿಡುಗಡೆ ಮಾಡಲು ಉದ್ದೇಶಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸಂಖ್ಯೆ:ಇಸಿ/ಹಿನಾಕೋ/ಕಗ್ರಾಅಸಂ/ಬಾಗಲಕೋಟೆ/2014-15 3924

ವಿಕಲಚೇತನರ ಹಾಗೂ ಹಿರಿಯ
ನಾಗರಿಕರ ಸಬಲೀಕರಣ ನಿರ್ದೇಶನಾಲಯ,
ಪೋಡಿಯಂ ಬ್ಲಾಕ್, ವಿ.ವಿ. ಗೋಪುರ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು-5600 01.
**ದಿನಾಂಕ:13/11/2014**

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರವಾಗಿ ವಿವರಿಸಿದ ಕಾರಣಗಳನ್ವಯ, ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಸಂಸ್ಥೆಯ ವತಿಯಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಬಾಗಲಕೋಟೆಯ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15ನೇ ಸಾಲಿಗೆ ಅನ್ವಯವಾಗುವ ರೂ.6,15,600/-(ರೂ.ಆರು ಲಕ್ಷದ ಹದಿನೈದು ಸಾವಿರದ ಆರುನೂರು ಮಾತ್ರ)ಗಳ ಸಹಾಯಧನವನ್ನು ಅನುಬಂಧ-1 ರಲ್ಲಿನ ವೆಚ್ಚಗಳಿಗಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ

ಪುಟ ಸಂಖ್ಯೆ..3ಕ್ಕೆ

ಸಂಖ್ಯೆ:ಇಸಿ/ಹಿನಾಕೋ/ಕಗ್ರಾಅಸಂ/ಬಾಗಲಕೋಟೆ/2014-15 3924 **ದಿನಾಂಕ:13/11/2014**

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರು, ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲಾಗಿದೆ. ಸಂಸ್ಥೆಯು ಸಲ್ಲಿಸುವ ಅನುದಾನದ ಬಿಲ್ಲನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಜಿಲ್ಲೆರವರು ಮೇಲು ಸಹಿ ಮಾಡಲು ಸೂಚಿಸಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸದರಿ ಅನುದಾನವನ್ನು ಲೆಕ್ಕಶೀರ್ಷಿಕೆ 2235-02-104-2-04 ಯೋಜನೆ ಉಪಲೆಕ್ಕಶೀರ್ಷಿಕೆ 101 ಸಹಾಯಧನದಡಿ 2014-15ನೇ ಸಾಲಿನಲ್ಲಿ ಭರಿಸತಕ್ಕದ್ದು.

## ಷರತ್ತುಗಳು

- ಅನುದಾನದ ಬಿಡುಗಡೆಗೆ ಮೊದಲು ಸ್ವಯಂ ಸೇವಾ ಸಂಸ್ಥೆಯು ರೂ.50.00ಗಳ ಮೌಲ್ಯದ ಛಾಪಾ ಕಾಗದದಲ್ಲಿ ಸರ್ಕಾರ/ಇಲಾಖೆಯಿಂದ ಪಡೆಯುವ ಅನುದಾನವನ್ನು ನಿಗದಿತ ಉದ್ದೇಶಕ್ಕೆ ಬಳಸಲಾಗುತ್ತದೆ ಎಂದು ತಪ್ಪಿದಲ್ಲಿ ಶೇ.15ರಷ್ಟು ಸರಳ ಬಡ್ಡಿಯೊಂದಿಗೆ ಸರ್ಕಾರ/ಇಲಾಖೆಗೆ ಹಿಂತಿರುತಿಸುವುದಲ್ಲದೆ, ಸರ್ಕಾರದ ಹಣದ ದುರುಪಯೋಗದ ಆಧಾರದ ಮೇಲೆ ಕ್ರಿಮಿನಲ್ ಶಿಕ್ಷೆಗೆ ಸಿದ್ಧರಿರುವುದಾಗಿ ಮುಚ್ಚಳಿಕೆ ನೀಡತಕ್ಕದ್ದು.
- ಸರ್ಕಾರದ ಆದೇಶ ಸಂ:ಮಮಇ/270/ಪಿಹೆಚ್‌ಪಿ/2013 ದಿನಾಂಕ:28.08.2013 ರಲ್ಲಿ ಜಾರಿಗೆ ಬಂದಿರುವ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಸಹಾಯವಾಣಿ ಕೇಂದ್ರಗಳಿಗೆ ಅನುದಾನ ನೀಡುವ ಯೋಜನೆಗಳಲ್ಲಿನ ಎಲ್ಲಾ ನಿಯಮಗಳು, ಷರತ್ತುಗಳು ಹಾಗೂ ನಿಬಂಧನೆಗಳಿಗೆ ಬದ್ಧವಾಗಿರತಕ್ಕದ್ದು.
- ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳು ಸೂಚನೆಗಳು ಹಾಗೂ ಆದೇಶಗಳನ್ನು ಪಾಲಿಸಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.
- ಸಹಾಯವಾಣಿ ಕೇಂದ್ರದ ವೃದ್ಧ ಫಲಾನುಭವಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ, ಕೊಡುಗೆ, ದಾನ ಮುಂತಾದವುಗಳನ್ನು ಸ್ವೀಕರಿಸದೆ ಸಹಾಯವಾಣಿ ಕೇಂದ್ರವನ್ನು ಸುವ್ಯವಸ್ಥಿತವಾಗಿ ನಡೆಸಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.
- ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿದ ಎಲ್ಲಾ ವಿಧವಾದ ಸ್ಥಿರ ಹಾಗೂ ಚರ ಆಸ್ತಿಗಳ ವಿವರಗಳನ್ನು ದಾಖಲೆಗಳ ಸಮೇತ ನಿರ್ದೇಶನಾಲಯವು ಕೋರಿದ ಕೂಡಲೇ ಹಿಂದಿರುಗಿಸಲು ಬದ್ಧವಾಗಿರತಕ್ಕದ್ದು.
- ಅನುದಾನದ ಬಗ್ಗೆ ಲೆಕ್ಕ ಪತ್ರಗಳನ್ನು ಸುವ್ಯವಸ್ಥಿತವಾಗಿ ಸಹಾಯವಾಣಿ ಕೇಂದ್ರದಲ್ಲೇ ನಿರ್ವಹಿಸತಕ್ಕದ್ದು ಹಾಗೂ ಇಲಾಖೆಯ ಅಧಿಕಾರಿಗಳು ಸಂಸ್ಥೆಯ ತನಿಖೆಗೆ ಬಂದಾಗ ಅಥವಾ ಅನಿರೀಕ್ಷಿತ ಭೇಟಿ ನೀಡಿದಾಗ ಒದಗಿಸತಕ್ಕದ್ದು.
- ಸಂಸ್ಥೆಯು ಆಡಳಿತ ಮತ್ತು ಆರ್ಥಿಕ ಸುಸ್ಥಿತಿಯ ಬಗ್ಗೆ ಅನುದಾನವನ್ನು ಸಹಾಯವಾಣಿ ಕೇಂದ್ರದ ನಿರ್ವಹಣೆಗೆ ಮಾತ್ರ ಉಪಯೋಗಿಸುತ್ತೇವೆ. ಯೋಜನೆಯಲ್ಲಿದ್ದಂತೆ ಕಾರ್ಯಕ್ರಮಗಳನ್ನು, ಸೇವೆಗಳನ್ನು ಯಶಸ್ವಿಯಾಗಿ ನಡೆಸುತ್ತೇವೆಂದು ಹಾಗೂ ಸಹಾಯವಾಣಿ ಕೇಂದ್ರದ ವರದಿಯನ್ನು ಕಾಲಕಾಲಕ್ಕೆ ಇಲಾಖೆಗೆ ಒದಗಿಸುತ್ತೇವೆಂದು ಪ್ರಮಾಣೀಕರಿಸತಕ್ಕದ್ದು.
- ಪ್ರತಿ ಮಾಹೆಯ 7ನೇ ದಿನಾಂಕದೊಳಗಾಗಿ ನಿಗದಿತ ನಮೂನೆಯಲ್ಲಿ ಪ್ರಗತಿ ವರದಿಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ದೃಢೀಕರಣದೊಂದಿಗೆ ಪ್ರಧಾನ ಕಛೇರಿಗೆ ಸಲ್ಲಿಸುವುದು.

ಪುಟ ಸಂಖ್ಯೆ..4ಕ್ಕೆ

ಸಂಖ್ಯೆ:ಇಸಿ/ಹಿನಾಕೋ/ಕಗ್ರಾಅಸಂ/ಬಾಗಲಕೋಟೆ/2014-15/3924 ದಿನಾಂಕ:13/11/2014

- ಅಂಶವಾರು ಉಪಯೋಗತಾ ಪ್ರಮಾಣ ಪತ್ರವನ್ನು ಲೆಕ್ಕಪರಿಶೋಧಕರಿಂದ ಪರಿಶೀಲಿಸಿ ಸಲ್ಲಿಸುವುದು.
- ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಗಳನ್ವಯ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.

13/11/14
ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಬೆಂಗಳೂರು.

**ರವರಿಗೆ**

ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಮಾಹಿತಿಗಾಗಿ ಮತ್ತು ಸರ್ಕಾರದ ಮಾನದಂಡಗಳನ್ನು ಸಂಪೂರ್ಣವಾಗಿ ಪೂರೈಸಿರುವ ದೃಢೀಕರಣವನ್ನು ಹಾಗೂ ರೂ.**6,15,600**/-ಗಳಿಗೆ ಅನುದಾನದ ಬಿಲ್ಲನ್ನು ಮೇಲುಸಹಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ರವರಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೂಲಕ ಸಲ್ಲಿಸಲು ಸೂಚಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:.**

1. ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ ಇವರ ಮಾಹಿತಿಗಾಗಿ.
2. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ, ಇವರು ರೂ. **6,15,600**/-ಗಳಿಗೆ ಅನುದಾನದ ಬಿಲ್ಲನ್ನು ಮೇಲುಸಹಿ ಮಾಡಲು ಕೋರಿದೆ.
3. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಜಿಲ್ಲೆರವರು ಸಂಸ್ಥೆಯವರಿಂದ ನಿಯಮಾನುಸಾರ ಷರತ್ತುಗಳ ಮುಚ್ಚಳಿಕೆಯನ್ನು ಪಡೆದು, ಚೆಕ್ ವಿತರಿಸುವುದು ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಸಮರ್ಪಕ ನಿರ್ವಹಣೆ ಬಗ್ಗೆ ಪರಿಶೀಲಿಸುವುದು.
4. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಮಾಹಿತಿಗಾಗಿ
5. ಆಯವ್ಯಯ/ಅನುದಾನ ವಿಭಾಗ, ಪ್ರಧಾನ ಕಛೇರಿ, ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ
6. ಉಪನಿರ್ದೇಶಕರು, ಖಜಾನೆ ಗಣಕಜಾಲ, ಖನಿಜಭವನ, ಬೆಂಗಳೂರು
7. ಲೆಕ್ಕ ಅಧೀಕ್ಷಕರು, ಪ್ರಧಾನ ಕಛೇರಿ, ಬೆಂಗಳೂರು
8. ವೆಬ್‌ಸೈಟ್ ವಿಭಾಗ, ಪ್ರಧಾನ ಕಛೇರಿ, ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಪ್ರತಿ
10. ಹೆಚ್ಚುವರಿ ಪ್ರತಿ

ಅನುಬಂಧ-1

ಸಂಖ್ಯೆ:ಇಸಿ/ಹಿನಾಕೋ/ಕಗ್ರಾಅಸಂ/ಬಾಗಲಕೋಟೆ/2014-15/3924 ದಿನಾಂಕ:13/11/2014

ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ), ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಸಂಸ್ಥೆಯ ವತಿಯಿಂದ ಬಾಗಲಕೋಟೆಯ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಕ್ಕೆ 2014-15ನೇ ಸಾಲಿಗೆ ಅರ್ಹವಾಗುವ ಅನುದಾನದ ವಿವರಗಳು

| | | | | | | |
|---|---|---|---|---|---|---|
| (ಅ) | **ಆವರ್ತಕ ವೆಚ್ಚಗಳು** | | | | | |
| 1 | ಪ್ರಾಜೆಕ್ಟ್ ಕೋ-ಆರ್ಡಿನೇಟರ್ | 1 | 12000 | 12 | 1 | 144000 |
| 2 | ಕೌನ್ಸಿಲರ್/ಸಮಾಜ ಸೇವಕರು | 3 | 10000 | 12 | 3 | 360000 |
| 3 | ಕಛೇರಿ ಸೇವಕರು ಮತ್ತು ಸ್ವಚ್ಛತಾಗಾರರು | 1 | 6000 | 12 | 1 | 72000 |
| | **ಸಿಬ್ಬಂದಿಗಳಿಗೆ ಗೌರವಧನ ಒಟ್ಟು-(1)** | **5** | | | | **576000** |
| 4 | ಲೇಖನ ಸಾಮಗ್ರಿ | | 1000 | 12 | | 12000 |
| 5 | ಅಂಚೆ ಚೀಟಿ | | 1000 | 12 | | 12000 |
| 6 | ಪ್ರಯಾಣ ಭತ್ಯೆ | | 2000 | 12 | | 24000 |
| 7 | ದೂರವಾಣಿ ವೆಚ್ಚ | | 1500 | 12 | | 18000 |
| 8 | ಹಿರಿಯ ನಾಗರಿಕರ ಯೋಜನೆಗಳ ಪ್ರಚಾರ | | 1500 | 12 | | 18000 |
| 9 | ತುರ್ತು ಔಷಧ | | 2000 | 12 | | 24000 |
| | **ಕಛೇರಿ ವೆಚ್ಚಗಳು ಒಟ್ಟು - (2)** | | | | | **108000** |
| | **ಒಟ್ಟು ಆವರ್ತಕ ವೆಚ್ಚಗಳು -(3)** | [1+2] | | | | ***684000*** |
| | **ಒಟ್ಟು ಅನಾವರ್ತಕ ವೆಚ್ಚಗಳು -(4)** | | | | | **0** |
| | **ಒಟ್ಟು ಮೊತ್ತ (3+4)** | | | | | **684000** |
| | (-)ಸಂಸ್ಥೆಯಿಂದ ಭರಿಸಬೇಕಾದ ಶೇ.10ರಷ್ಟು ಅನುದಾನ ಕಡಿತಗೊಳಿಸಿದೆ | | | | | 68400 |
| | **2014-15ನೇ ಸಾಲಿಗೆ ಸಂಸ್ಥೆಯು ಅರ್ಹವಾಗುವ ಅನುದಾನ ರೂ.** | | | | | **615600** |

**(ರೂ. ಆರು ಲಕ್ಷದ ಹದಿನೈದು ಸಾವಿರದ ಆರು ನೂರು ಮಾತ್ರ)**

13/11/14

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ, ಬೆಂಗಳೂರು.